# IV ನೇ ಹೆಚ್ಚುವರಿ ನ್ಯಾಯಾಲಯ ಹಾಗೂ ಜೆ ಎಮ್ ಎಫ್ ಸಿ, ಬೆಳಗಾವಿ

OS.No. 643/2017

PW-1

**ಪ್ರಮಾಣ ವಚನ ಬೋಧಿಸಿದ ದಿನಾಂಕಃ 08-12-2022.**

ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ವಕೀಲರು ಶ್ರೀ. MNK ರವರಿಂದ.

ನಿಪಿ. 15 ರಂತೆ ನೀವು ಯಾವಾಗ ಇ ಸ್ಟಾಂಪಿಂಗ್ ಬೆಳಗಾವಿಯಲ್ಲಿ ಶುರುವಗಿರುತ್ತದೆ ಎಂದು ಕೇಳಿರುತ್ತೀರಿ ಸದರಿ ಮಾಹಿತಿಗೆ ಪ್ರಶ್ನೆಗೆ ಸಂಬಂಧಿಸಿದಂತೆ ನೀವು ಹಾಜರು ಪಡಿಸಿರುವ ದಾಖಲೆಗಳಲ್ಲಿ ಉತ್ತರ ಇರುವುದಿಲ್ಲ ಎಂದರೆ ಸಾಕ್ಷಿ ಇದೆ ಎನ್ನುತ್ತಾರೆ. ತೆಲಗಿ ಪ್ರಕರಣವಾದ ನಂತರ ಸರ್ಕಾರದವರ ಚಾಪಕಾಗದವನ್ನು ಬಂದ ಮಾಡಿರುತ್ತಾರೆ ಎಂದರೆ ಸರಿ. ತೆಲಗಿ ಪ್ರಕಾರಣ ಆದ ನಂತರ ಪೋಲಿಸರು ಬ್ಯಾಂಕ್ ಮತ್ತು ಬಾಂಡ್‌ರೈಟರವರು ಚಾಪಕಾಗದವನ್ನು ಮಾರಾಟ ಮಾಡುವುದನ್ನು ನಿಷೇದಿಸಿರುತ್ತಾರೆ ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ತದನಂತರ ಸರ್ಕಾರದವರು ದಿನಾಂಕಃ 01-04-2003 ರಿಂದ ಚಪಕಾಗದಗಳನ್ನು ಮಾರಾಟ ಮಾಡುವುದನ್ನು ರದ್ದು ಪಡಿಸಿರುತ್ತಾರೆ ಎಂದರೆ ಸರಿ. ದಿನಾಂಕಃ 01-04-2003 ಕ್ಕೂ ಪೂರ್ವದಲ್ಲೇ ತೆಲಗಿ ಪ್ರಕರಣ ಶುರುವಾಗಿತ್ತು ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ನಿಮಗೆ ಮಾಹಿತಿ ಇದ್ದರು ಸಹ ಮಾಹಿತಿ ಇಲ್ಲ ಎಂದು ಸುಳ್ಳು ಹೇಳುತಿದ್ದೀರಿ ಎಂದರೆ ಸರಿಯಲ್ಲ. ನೀವು ಸುಳ್ಳು ಚಾಪಕಾಗದಗಳನ್ನು ತೆಗೆದುಕೊಂಡು ನಿಮ್ಮ ಪ್ರಕರಣಕ್ಕೆ ಸಹಾಯವಾಗುವ ಉದ್ದೇಶದಿಂಂದ ಸುಳ್ಳು ಸಾಕ್ಷಿ ನುಡಿಯತಿದ್ದೀರಿ ಎಂದರೆ ಸರಿಯಲ್ಲ. ಅದೇ ರೀತಿ ಪ್ರತಿವಾದಿಯರು ಯಾವುದೇ ರೀತಿಯ ಸಹಿ ಮಾಡದೆ ಇದ್ದರು ಸಹ ಅವರು ಸಹಿಯನ್ನು ಸೃಷ್ಟಿ ಮಾಡಿ ಸುಳ್ಳು ದಾವೆ ಹೂಡಿರುತ್ತೀರಿ ಎಂದರೆ ಸರಿಯಲ್ಲ.
ಮರು ವಿಚಾರಣೆ ಇಲ್ಲ.

(ತೆರೆದ ನ್ಯಾ ಸಾಕ್ಷಿ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿಯಿದೆ.

ಸಹಿ/-

4 ನೇ ಹೆಚ್ಚುವರಿ ಸಿವಿಲ್ ನ್ಯಾ. ಹಾಗೂ

ಜೆ ಎಮ್ ಎಫ್ ಸಿ, ಬೆಳಗಾವಿ